

ಆರೋಗ್ಯ ವ್ಯವಸ್ಥೆಯ ಲೋಪದೋಷಗಳನ್ನು ಎತ್ತಿ ತೋರಿಸುತ್ತಿದೆ. ಅನೇಕ ಕುಟುಂಬಗಳು ಮತ್ತು ಮಕ್ಕಳ ಮೇಲಾಗುತ್ತಿರುವ ಕೋವಿಡ್ ದಾಳಿಯನ್ನು ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ಎದುರಿಸಲಾಗದೆ ಅಸಹಾಯಕರಾಗಿದ್ದಾರೆ. ಮೊದಲ ಅಲೆಯ ಬೆನ್ನಲ್ಲೇ ಇಂತಹದೊಂದು ತೀವ್ರತೆಯನ್ನು ಮೊದಲೇ ಮನಗಂಡು, ಅಗತ್ಯವಿರುವ ತಯಾರಿಗಳನ್ನು ಮಾಡಬೇಕಿತ್ತು ಎಂದು 'ಐ.ಎಲ್.ಪಿ.'ಯ (ಇಂಡಿಯಾ ಲಿಟೆರಸಿ ಪ್ರಾಜೆಕ್ಟ್‌ನ) ವಿಕ್ಟರ್ ಟಾರೋ ಹೇಳುತ್ತಾರೆ.

ಭಾರತದ ಒಟ್ಟು ಜನಸಂಖ್ಯೆಯಲ್ಲಿ 18 ವರ್ಷದೊಳಗಿನ ಮಕ್ಕಳ ಪಾಲು ಶೇ. 40. ಅದರಲ್ಲಿ ಶೇ.70 ಅಂದರೆ ಸರಿಸುಮಾರು 35 ಕೋಟಿ ಮಕ್ಕಳು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ ಎಂಬುದು ಒಂದು ಅಂದಾಜು (ಜನಗಣತಿ 2011). ಸದ್ಯ ಮಕ್ಕಳು ಎದುರಿಸುತ್ತಿರುವ ದೊಡ್ಡ ಸಮಸ್ಯೆಗಳು ರೋಗ ನಿರೋಧಕಗಳನ್ನು ಪಡೆಯುವುದು, ಹದಿವಯಸ್ಸಿನ ಕಿಶೋರ / ಕಿಶೋರಿಯರಿಗೆ ಪೌಷ್ಟಿಕ ಆಹಾರ ಒದಗಿಸುವುದು, ಮತ್ತು ಅಂಗನವಾಡಿ ಮತ್ತು ಶಾಲೆಗಳು ತೆರೆದಿಲ್ಲದಿರುವುದರಿಂದ ಕಲಿಕೆಯಲ್ಲಿ ಮುಂದುವರೆಯಲಾಗದೆ ಕುಂಟುತ್ತಿರುವುದು ಇವೇ ಆಗಿವೆ.

ಇನ್ನು ಕೊರೊನಾ ಮೂರನೇ ಅಲೆಯ ಸಾಧ್ಯತೆಯನ್ನೂ ಎದುರಿಸುವುದಿದೆ. ಅದು ಮಕ್ಕಳ ಮೇಲೆ ನೇರವಾಗಿ ದಾಳಿ ಇಡಲಿದೆ ಎಂಬ ಅಪಾಯದ ಮುನ್ಸೂಚನೆ ಕೇಳಿಬರುತ್ತಿದೆ. ಅಷ್ಟು ಹೊತ್ತಿಗಾದರೂ ನಾವು ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲೇ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಐ.ಎಲ್.ಪಿ.ಯ ಸುಚಿತ್ರಾ ರಾವ್ ಬೊಟ್ಟು ಮಾಡಿ ತೋರಿಸುತ್ತಾರೆ. ಸುಚಿತ್ರಾ ಹೇಳುವ ಒಂದು ಪ್ರಮುಖ ಅಂಶ: 'ನಮ್ಮಲ್ಲಿ ಶಿಶುಗಳು ಮತ್ತು ಮಕ್ಕಳಿಗಾಗಿ ಐ.ಸಿ.ಯು.ಗಳು ಇಲ್ಲ. ಮಕ್ಕಳನ್ನು ವಯಸ್ಕರೊಡನೆ ಐ.ಸಿ.ಯು.ಗಳಲ್ಲಿ ಇರಿಸುವುದು ಸಮರ್ಪಕವಲ್ಲ. ಮಕ್ಕಳನ್ನು ಐ.ಸಿ.ಯು.ಗಳ ತನಕ ತಳ್ಳದಂತೆ ಮುನ್ನೆಚ್ಚರಿಕೆ ವಹಿಸುವುದೇ ಈಗಿನ ತುರ್ತು'.

ವಿಜಯಪುರದಲ್ಲಿ ಎಚ್.ಐ.ವಿ. ಪೀಡಿತ ಮಕ್ಕಳಿಗಾಗಿ ನಿಲಯ ನಡೆಸುತ್ತಿರುವ 'ಉಜ್ವಲ ಸಂಸ್ಥೆ'ಯ ವಾಸುದೇವ ತೋಳಬಂದಿಯವರ ಚಿಂತೆ, 'ಎಚ್.ಐ.ವಿ. ಮತ್ತಿತರ ಮಾರಣಾಂತಿಕ ಸೋಂಕುಗಳಿಗೆ ಈಡಾಗಿರುವವರಿಗೆ ಕಳೆದ ವರ್ಷ ಮನೆಮನೆಗೆ ಎ.ಆರ್.ಟಿ. ಔಷಧಿಗಳನ್ನು ತಲುಪಿಸುವಲ್ಲಿ ಸರ್ಕಾರದ ಸಂಬಂಧಿತ ಇಲಾಖೆಗಳು ಉತ್ತಮ ಕೆಲಸವನ್ನು ಮಾಡಿವೆ. ಆದರೆ ಈ ವರ್ಷ ಇಂತಹ ಮಕ್ಕಳಿಗಿರುವ ತೊಂದರೆಯ ಜೊತೆ ಕೊರೊನಾ ಸೋಂಕು ಕೂಡಾ ಆವರಿಸಿಕೊಂಡರೆ ಮಕ್ಕಳ ಪಾಲನೆಯ ಪ್ರಶ್ನೆ ಬೃಹದಾಕಾರ ತಾಳುತ್ತದೆ. ಹೀಗಾಗಿ, ಪ್ರಮುಖವಾಗಿ ಗ್ರಾಮೀಣ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂಗವಿಕಲತೆಯಿರುವ ಮಕ್ಕಳು ಮತ್ತು ವಿವಿಧ ರೀತಿಯ ಸೋಂಕು ಮತ್ತು ಜಾಡ್ಯಗಳಿರುವ ಮಕ್ಕಳ ರಕ್ಷಣೆಗಾಗಿ ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಯಾವುದೇ ಮಗು ಕೋವಿಡ್ ಪರಿಣಾಮಗಳಿಂದಾಗಿ ಭಯಭೀತರಾಗದಂತಹ ವಾತಾವರಣವನ್ನು ಬೆಳೆಸುವ ಭರವಸೆಯನ್ನು ಕೊಡಬೇಕು.'

ವಿಪತ್ತು ನಿರ್ವಹಣೆ ಪರಿಣತ ಡಾ. ಮಹೇಂದ್ರ ರಾಜನ್ ಅವರು ಕಳೆದ ವರ್ಷದಿಂದಲೂ ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ಸರ್ಕಾರಗಳು ಹಾಗೂ ಸ್ವಯಂಸೇವಾ ಸಂಘಟನೆಗಳೊಡನೆ ಕೋವಿಡ್ ನಿರ್ವಹಣೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿನ ದಿನಗಳ ಬೆಳವಣಿಗೆಗಳನ್ನು ಗಮನಿಸಿರುವ ಅವರು ಹೇಳುವುದು, 'ಮಾಹಿತಿ ತಂತ್ರಜ್ಞಾನವನ್ನು, ಸಾಮಾಜಿಕ ಜಾಲತಾಣಗಳನ್ನು ಬಳಸುವ ಸಾಮರ್ಥ್ಯವಿರುವ ನಗರದ ಜನರಿಗೆ ಆಸ್ಪತ್ರೆಗಳು, ವೈದ್ಯರ ಸಂಪರ್ಕ ಮತ್ತು ಈಗಿನ ದೊಡ್ಡ ತುರ್ತಾಗಿರುವ ಔಷಧಗಳು, ಆಮ್ಲಜನಕ ಹಾಗೂ ಆಸ್ಪತ್ರೆಯಲ್ಲಿ ಹಾಸಿಗೆಗಳಿರುವುದು ಇವೇ ಮೊದಲಾದವುಗಳ ಬಗ್ಗೆ ಮಾಹಿತಿ ಬೆರಳ ತುದಿಯಲ್ಲಿ ಸಿಗುತ್ತಿದೆ. ಕೋವಿಡ್ ಪರಿಸ್ಥಿತಿ ಹೀಗೇ ಮುಂದುವರೆದರೆ ಅದು ಇನ್ನೂ ದಟ್ಟವಾಗಿ ಗ್ರಾಮೀಣ ಪ್ರದೇಶಗಳಲ್ಲೆಡೆ ವ್ಯಾಪಿಸುತ್ತದೆ. ಅದು ಮಕ್ಕಳನ್ನು ಬಾಧಿಸುವ ಮೊದಲು ನಾವು ಎಚ್ಚೆತ್ತುಕೊಳ್ಳಬೇಕಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆಗಳು ಶೀಘ್ರವಾಗಿ ಸಂಘಟಿತವಾಗಿ ಅದರ ಮಾಹಿತಿ ಎಲ್ಲರಿಗೂ ದೊರಕುವಂತೆ ಆಗಬೇಕಿದೆ.'

## ಅಡ್ಡ ಪರಿಣಾಮಗಳು

ಈಗ ಕೋವಿಡ್ ತೀವ್ರವಾಗಿ ಹರಡುವ ಭಯದಿಂದ ಜನರ ಓಡಾಟವನ್ನು ನಿರ್ಬಂಧಿಸಲಾಗಿದೆ. ಆದರೂ ಕೆಲವು ಚಿಕ್ಕಪುಟ್ಟ ರಿಯಾಯಿತಿಗಳು ಇವೆ. ಅದರಲ್ಲೊಂದು ಮದುವೆಗಳನ್ನು ಮನೆಗಳಲ್ಲೇ ಮಾಡಬಹುದು, ಹೆಚ್ಚು ಜನರಿರಬಾರದು ಎನ್ನುವುದು.

ಮೇಲ್ನೋಟಕ್ಕೆ ಇದು ಸೂಕ್ತವೆಂದು ಕಂಡುಬಂದರೂ, ಅದರ ಪರಿಣಾಮ ಹದಿಹರೆಯದ ಹೆಣ್ಣುಮಕ್ಕಳ ಮೇಲೆ ಆಗುತ್ತಿದೆ ಎಂದು ಟೆರೆಡೆಸ್ ಹೋಮ್ಸ್ ನೆದರ್‌ಲೆಂಡ್‌ನ ತಂಗ ಪೆರುಮಾಳ್ ಪೊನ್‌ಪಾಂಡಿಯವರು ಹೇಳುತ್ತಾರೆ. 'ಶಾಲೆಯಿಲ್ಲ, ಈಗಿನ ಪರಿಸ್ಥಿತಿಗಳು ಮತ್ತು ಮುಂದಿನ ದಿನಗಳನ್ನು ಕುರಿತು ಯಾವುದೇ ಖಾತರಿಯಿಲ್ಲ ಎಂಬ ಕಾರಣಕ್ಕೆ ಬಾಲ್ಯವಿವಾಹಗಳು ಗುಟ್ಟಾಗಿ ನಡೆದುಹೋಗುತ್ತಿವೆ. ಹೀಗೆ ಬಾಲ್ಯವಿವಾಹಕ್ಕೆ ಬಿದ್ದ ಮಕ್ಕಳು ಕೌಟುಂಬಿಕ ದೌರ್ಜನ್ಯಕ್ಕೆ, ಸಾಗಣೆಗೆ ಗುರಿಯಾಗುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಕಳೆದ ಸಾಲಿನಲ್ಲಿ ಚೈಲ್ಡ್‌ಲೈನ್, ಮಕ್ಕಳ ಸಂರಕ್ಷಣಾ ಘಟಕಗಳು ಹಾಗೂ ಸ್ವಯಂಸೇವಾ ಸಂಘಟನೆಗಳು ಒಂದಾಗಿ ನೂರಾರು ಬಾಲ್ಯವಿವಾಹಗಳನ್ನು